ವಿಜಯ ಕರ್ನಾಟಕ, 19ನೇ ಜುಲೈ 2017



KSIIDC

# ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ)

"ಖನಿಜ ಭವನ", 4ನೇ ಮಹಡಿ, ಈಸ್ಟ್ ವಿಂಗ್, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001.

## ಪ್ರಕಟಣೆ (2ನೇ ಕರೆ)

ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ) ಸಂಸ್ಥೆಯು 1964ನೇ ಇಸವಿಯಲ್ಲಿ ಸ್ಥಾಪನೆಗೊಂಡು ಬೃಹತ್ ಮತ್ತು ಮಧ್ಯಮ ಕೈಗಾರೀಕರಣಕ್ಕೆ ಕಾರ್ಯಸಾಧುವಾಗಿತ್ತು. ಪ್ರಸ್ತುತ ಬಾಕಿಯಿರುವ ಸಾಲ ಮತ್ತು ಹೂಡಿರುವ ಷೇರು ಬಂಡವಾಳವನ್ನು ಘಟಕಗಳಿಂದ ವಸೂಲಾತಿ ಮಾಡುವುದಾಗಿರುತ್ತದೆ. ಇದಲ್ಲದೆ ಮೂಲಸೌಲಭ್ಯ ಅಭಿವೃದ್ಧಿ ಯೋಜನೆಗಳಿಗೆ ಉತ್ತೇಜನ ನೀಡುವ ಸಂಬಂಧ ಸರ್ಕಾರದ ನೋಡಲ್ ಏಜೆನ್ಸಿಯಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದೊಂದಿಗೆ (PPP) ಯೋಜನೆಗಳನ್ನು ಅಭಿವೃದ್ಧಿಪಡಿಸುವುದು ಮುಖ್ಯ ಧ್ಯೇಯವಾಗಿರುತ್ತದೆ. ಈ ಕೆಳಕಂಡ ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಿ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ದಿನಾಂಕ: 17.05.2017ರಂದು ಜಾಹೀರಾತು ಪ್ರಕಟಿಸಲಾಗಿತ್ತು. ಸದರಿ ಹುದ್ದೆಗೆ ಮತ್ತೊಮ್ಮೆ ಅರ್ಜಿಗಳನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ.

ಉಪ ವ್ಯವಸ್ಥಾಪಕರು : 1 ಹುದ್ದೆ - ಹೈದರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗೆ ಮೀಸಲು - ಸಾಮಾನ್ಯ ವರ್ಗ. ಸರ್ಕಾರಿ ಅಧಿಸೂಚನೆ ಸಂ.ಡಿಪಿಎಆರ್ 06 ಪಿಎಲ್ಎಕ್ಸ್ 2012 ಬೆಂಗಳೂರು ದಿನಾಂಕ: 06.11.2013ರಲ್ಲಿ ನಿರ್ದಿಷ್ಟಪಡಿಸಿದಂತೆ ಅಭ್ಯರ್ಥಿಯು **ಹೈದರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಯಾಗಿರಬೇಕು.**

ಕೆಳಕಂಡ ವಿದ್ಯಾರ್ಹತೆ, ಅನುಭವ ಮತ್ತು ವಯೋಮಿತಿಯ ಮಾನದಂಡಗಳನ್ನು ಹೊಂದಿರುವ ಅಭ್ಯರ್ಥಿ ಮಾತ್ರ ಅರ್ಜಿಯನ್ನು ಸಲ್ಲಿಸಬಹುದು.

**ವಿದ್ಯಾರ್ಹತೆ ಮತ್ತು ಅನುಭವ : ಎಸಿಎ ಅಥವಾ ಎಂಬಿಎ (ಐಐಎಂ ಅಥವಾ ತತ್ಸಮಾನ) ಅಥವಾ ಎಸಿಎಸ್ ವಿದ್ಯಾರ್ಹತೆ ಹೊಂದಿದ್ದು, ಅಭಿವೃದ್ಧಿ ಬ್ಯಾಂಕಿಂಗ್‌ನಲ್ಲಿ ಅಥವಾ ಯಾವುದೇ ಅರ್ಹ ಹಣಕಾಸು ಸಂಸ್ಥೆಯಲ್ಲಿ ಕನಿಷ್ಠ ಮೂರು ವರ್ಷಗಳ ಅನುಭವ ಹೊಂದಿರಬೇಕು.**

**ವಯೋಮಿತಿ: 25 ರಿಂದ 35 ವರ್ಷಗಳು.**

ವೇತನ ಶ್ರೇಣಿ: ರೂ.28100-700-28800-800-33600-900-39000-1050-45300-1200-50120

ಮೂಲ ವೇತನದ ಜೊತೆಗೆ, ಜಾರಿಯಲ್ಲಿರುವ ನಿಗಮದ ನಿಬಂಧನೆಗಳ ಪ್ರಕಾರ ಹುದ್ದೆಗೆ ಅನ್ವಯಿಸುವ ಭತ್ಯೆಗಳಾದ ಡಿಎ, ಹೆಚ್ಆರ್ಎ, ಸಿಸಿಎ ಮತ್ತು ಪಿಎಫ್/ಗ್ರಾಚುಯಿಟಿ ಸೌಲಭ್ಯ. ವೈದ್ಯಕೀಯ ಸೌಲಭ್ಯಗಳು, ಜಿಪಿಎಲ್ಐ, ಮನೆ/ವಾಹನ/ಕಂಪ್ಯೂಟರ್‌ಗಳಿಗೆ ಮುಂಗಡ ಹಣ ಇತ್ಯಾದಿ.

ಸಾಮಾನ್ಯ: ಕನ್ನಡದಲ್ಲಿ ಓದಲು, ಬರೆಯಲು ಮತ್ತು ಸರಾಗವಾಗಿ ಮಾತನಾಡಲು ಬರುವುದು ಅಗತ್ಯ.

**ಅರ್ಜಿಯು ಒಂದು ಬಿಳಿ ಕಾಗದದ ಮೇಲೆ ಸ್ವ-ವಿವರಗಳನ್ನು ಬರೆದು ಅದರೊಂದಿಗೆ ಮೇಲ್ಕಂಡ ಪ್ರಮುಖ ಅಂಶಗಳಿಗೆ ಸಂಬಂಧಿಸಿದಂತೆ ಪ್ರಮಾಣಪತ್ರಗಳು ಮತ್ತು ಪ್ರಶಂಸಾ ಪತ್ರಗಳ ಪ್ರತಿಗಳು ಮತ್ತು ಇತ್ತೀಚೆಗೆ ತೆಗೆದ ಭಾವಚಿತ್ರ ಮತ್ತು ಸಮರ್ಥ ಅಧಿಕಾರಿಗಳಿಂದ ಹೊರಡಿಸಲಾದ ಜಾತಿ ಪ್ರಮಾಣಪತ್ರ/ವರ್ಗ ಪ್ರಮಾಣ ಪತ್ರಗಳ ಪ್ರತಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು, (ಪ್ರಭಾರ), ಕೆಎಸ್ಐಐಡಿಸಿ, ಇವರಿಗೆ ಜಾಹೀರಾತು ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗೆ ಸಲ್ಲಿಸುವುದು. ಮೊದಲನೇ ಪ್ರಕಟಣೆಗೆ ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸಬೇಕಿಲ್ಲ. ನೌಕರಿಯಲ್ಲಿರುವವರು ತಮ್ಮ ಇಲಾಖಾ ಮುಖಾಂತರ ಅರ್ಜಿಗಳನ್ನು ಸಲ್ಲಿಸುವುದು.**

**ನಿಗಮವು ಅಪೂರ್ಣವಾದ ಮತ್ತು ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.**

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

R.O. No. DIPR/MC&A/205/17-18